# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 505(69) |
| ಉತ್ತರಿಸಬೇಕಾದ ದಿನಾಂಕ | 11.03.2025 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ)ಕಡೆಯ ಸಭೆ ನಡೆದಿದ್ದು ಯಾವಾಗ? (ದಿನಾಂಕದೊಂದಿಗೆ ವಿವರಗಳ ಮಾಹಿತಿ ಒದಗಿಸುವುದು). | ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಡೆಯದಾಗಿ ಸಾಮಾನ್ಯ ಸಭೆಯು ದಿನಾಂಕ:08.07.2024ರಂದು ಜರುಗಿದ್ದು ಸದರಿ ಸಭೆಯ ಸಭಾ ಸೂಚನಾ ಪತ್ರದ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ. |
| ಆ) | ಈ ನಗರಾಭಿವೃದ್ಧಿ ಪ್ರಾಧಿಕಾರಗಳ ಸಭೆಗಳನ್ನು ನಿಯಮಿತವಾಗಿ ಯಾವ ಅವಧಿಯೊಳಗೆ ನಡೆಸಬೇಕಾಗಿದೆ. ಇದಕ್ಕೆ ಇರುವ ಕಾನೂನು ನಿಬಂಧನೆಗಳೇನು; (ಇದಕ್ಕೆ ಸಂಬಂಧಿಸಿದ ಸರ್ಕಾರದ ಆದೇಶದ ಪ್ರತಿ ಒದಗಿಸುವುದು) ನಿಯಮಿತ ಕಾಲಾವಧಿಯೊಳಗೆ ಸಭೆ ನಡೆಸದಿದ್ದರೆ ಅದಕ್ಕೆ ಜವಾಬ್ದಾರರು ಯಾರು? (ಇದಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ ಪ್ರತಿಗಳೊಂದಿಗೆ ಮಾಹಿತಿ ಒದಗಿಸುವುದು) | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 8 (i) ಮತ್ತು (ii) ಈ ಕೆಳಕಂಡಂತಿರುತ್ತದೆ **(ಅನುಬಂಧ-2).**<br><br>8. ಪ್ರಾಧಿಕಾರದ ಸಭೆ (Meeting of the Authority).-(1) ಪ್ರಾಧಿಕಾರದ ಸಭೆಗಳು ಅಧ್ಯಕ್ಷನಿಂದ ಆಯೋಜಿಸಲ್ಪಡತಕ್ಕದ್ದು ಮತ್ತು ಅವುಗಳು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯಾವುದೇ ಸ್ಥಳದಲ್ಲಿ ಆಯೋಜಿಸಲ್ಪಡತಕ್ಕದ್ದು.<br><br>(2) ಪ್ರಾಧಿಕಾರವು ಯುಕ್ತ ಸಮಯದಲ್ಲಿ ಸಭೆ ಸೇರತಕ್ಕದ್ದು ಮತ್ತು ಸಭೆಗಳ ವ್ಯವಹಾರಗಳ ನಿರ್ವಹಣೆಯ ಸಂದರ್ಭದಲ್ಲಿ ಯುಕ್ತ ನಿಯಮ ಮತ್ತು ನಡವಳಿಗಳನ್ನು ಪಾಲನೆ ಮಾಡತಕ್ಕದ್ದು. ಪ್ರತಿ ತಿಂಗಳಿಗೆ ಕನಿಷ್ಠ ಒಂದು ಸಭೆಯನ್ನು ಆಯೋಜಿಸತಕ್ಕದ್ದು. ಒಟ್ಟಾರೆ ಸದಸ್ಯರುಗಳ ಪೈಕಿ ಕನಿಷ್ಠ ಅರ್ಧದಷ್ಟು ಸದಸ್ಯರುಗಳು ಹಾಜರಿರದ ಹೊರತು ಯಾವುದೇ ಸಭೆಯಲ್ಲಿ ವ್ಯವಹಾರಗಳನ್ನು ನಡೆಸತಕ್ಕದ್ದಲ್ಲ.<br><br>ಸದರಿ ಕಾಯ್ದೆಯ ಅವಕಾಶದಂತೆ ಪ್ರಾಧಿಕಾರದ ಅಧ್ಯಕ್ಷರು ನಿಯಮಿತ ಕಾಲಾವಧಿಯೊಳಗೆ ಸಭೆಯನ್ನು ಆಯೋಜಿಸಬೇಕಾಗುತ್ತದೆ. |

ಸಂಖ್ಯೆ : ನಅಇ 56 ಗುಅಪ್ರಾ 2025

(ಸಹಿ)

**(ಬಿ.ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಅನುಬಂಧ - 1

ಸಂಖ್ಯೆ: ಬ.ನ.ಅ.ಪ್ರಾ.ಆಡಳಿತ.ಸಭೆ/01/2024-25

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ
ಕಾರ್ಯಾಲಯ, ಬಳ್ಳಾರಿ.
ದಿನಾಂಕ: 03/07/2024

## ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಕಲಂ 8(1) ರಂತೆ ಹೊರಡಿಸಲಾದ ಸಭೆಯ ಸೂಚನಾ ಪತ್ರ

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯನ್ನು ಸನ್ಮಾನ್ಯ ಶ್ರೀ ಜೆ.ಎಸ್.ಆಂಜಿನೇಯಲು, ಅಧ್ಯಕ್ಷರು ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 03/07/2024 ರಂದು ಪೂರ್ವಾಹ್ನ : 11-00 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರ ಕೊಠಡಿಯಲ್ಲಿ ನಿಗಧಿಪಡಿಸಲಾಗಿದ್ದ ಸಭೆಯನ್ನು ಕಾರಣಾಂತರಗಳಿಂದ ದಿನಾಂಕ: 08/07/2024 ರಂದು ಬೆಳಿಗ್ಗೆ 11-00 ಗಂಟೆಗೆ ಮುಂದೂಡಲಾಗಿರುತ್ತದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಸಭೆಗೆ ಹಾಜರಾಗಿ ಸಭೆಯ ಕಲಾಪಗಳನ್ನು ಯಶಸ್ವಿಗೊಳಿಸಬೇಕೆಂದು ಕೋರಲು ಮಾನ್ಯ ಅಧ್ಯಕ್ಷರಿಂದ ನಿರ್ದೇಶಿಸಲ್ಪಟ್ಟಿರುವೆನು.

3/7/24

ಆಯುಕ್ತರು,
ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ,
ಬಳ್ಳಾರಿ.

ಇವರಿಗೆ,

| | | | |
|---|---|---|---|
| 01 | ಸನ್ಮಾನ್ಯ ಶ್ರೀ ಜೆ.ಎಸ್.ಆಂಜಿನೇಯಲು, ಅಧ್ಯಕ್ಷರು ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ | : | ಅಧ್ಯಕ್ಷರು |
| 02 | ಸನ್ಮಾನ್ಯ ಶ್ರೀ ಬಿ. ನಾಗೇಂದ್ರ, ಶಾಸಕರು ಬಳ್ಳಾರಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರ, ಬಳ್ಳಾರಿ. | : | ಸದಸ್ಯರು |
| 03 | ಸನ್ಮಾನ್ಯ ಶ್ರೀ ಎನ್.ಭರತ್ ರೆಡ್ಡಿ, ಶಾಸಕರು, ಬಳ್ಳಾರಿ ನಗರ ವಿಧಾನ ಸಭಾ ಕ್ಷೇತ್ರ, ಬಳ್ಳಾರಿ | : | ಸದಸ್ಯರು |
| 04 | ಸನ್ಮಾನ್ಯ ಶ್ರೀ ವೈ.ಎಂ.ಸತೀಶ್, ಶಾಸಕರು (ವಿಧಾನ ಪರಿಷತ್), ಬಳ್ಳಾರಿ | : | ಸದಸ್ಯರು |
| 05 | ಸನ್ಮಾನ್ಯ ಶ್ರೀ ಪಿ.ಗಾದೆಪ್ಪ ತಂದೆ ಪಿ.ಓಬಣ್ಣ, ಗಾಂಧಿನಗರ, ಬಳ್ಳಾರಿ. | : | ಸದಸ್ಯರು |
| 06 | ಸನ್ಮಾನ್ಯ ಶ್ರೀ ಕೆ.ಶಿವಕುಮಾರ್, ಬಳ್ಳಾರಿ. | : | ಸದಸ್ಯರು |
| 07 | ಸನ್ಮಾನ್ಯ ಶ್ರೀ ಕೆ.ಎಸ್.ಭರತ್ ಕುಮಾರ್, ಬಳ್ಳಾರಿ. | : | ಸದಸ್ಯರು |
| 08 | ಸನ್ಮಾನ್ಯ ಶ್ರೀ ರಂಜಿತ್.ಕೆ ಬಳ್ಳಾರಿ. | : | ಸದಸ್ಯರು |
| 09 | ಸನ್ಮಾನ್ಯ ಶ್ರೀಮತಿ ವಿಜೇತ ಜೆರಾಲ್ಡ್, ಬಳ್ಳಾರಿ. | : | ಸದಸ್ಯರು |
| 10 | ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ | : | ಸದಸ್ಯರು |
| 11 | ಮಾನ್ಯ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ಬಳ್ಳಾರಿ | : | ಸದಸ್ಯರು |
| 12 | ಮಾನ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬಳ್ಳಾರಿ | : | ಸದಸ್ಯರು |
| 13 | ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಿಭಾಗ, ಬಳ್ಳಾರಿ | : | ಸದಸ್ಯರು |
| 14 | ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂ, ಬಳ್ಳಾರಿ | : | ಸದಸ್ಯರು |
| 15 | ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಯು.ಡಬ್ಲ್ಯೂ.ಎಸ್. ಅಂಡ್ ಡಿ.ಬಿ, ಬಳ್ಳಾರಿ | : | ಸದಸ್ಯರು |
| 16 | ಮಾನ್ಯ ಆಯುಕ್ತರು, ಮಹಾನಗರ ಪಾಲಿಕೆ, ಬಳ್ಳಾರಿ | : | ಸದಸ್ಯರು |
| 17 | ಮಾನ್ಯ ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ | : | ಸದಸ್ಯರು |
| 18 | ಮಾನ್ಯ ನಗರ ಯೋಜಕ ಸದಸ್ಯರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ | : | ಸದಸ್ಯರು |

ಅನುಬಂಧ-2



**8. ಪ್ರಾಧಿಕಾರದ ಸಭೆ (Meeting of the Authority).**–(1) ಪ್ರಾಧಿಕಾರದ ಸಭೆಗಳು ಅಧ್ಯಕ್ಷನಿಂದ ಆಯೋಜಿಸಲ್ಪಡತಕ್ಕದ್ದು ಮತ್ತು ಅವುಗಳು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯಾವುದೇ ಸ್ಥಳದಲ್ಲಿ ಆಯೋಜಿಸಲ್ಪಡತಕ್ಕದ್ದು.

(2) ಪ್ರಾಧಿಕಾರವು ಯುಕ್ತ ಸಮಯದಲ್ಲಿ ಸಭೆ ಸೇರತಕ್ಕದ್ದು ಮತ್ತು ಸಭೆಗಳ ವ್ಯವಹಾರಗಳ ನಿರ್ವಹಣೆಯ ಸಂದರ್ಭದಲ್ಲಿ ಯುಕ್ತ ನಿಯಮ ಮತ್ತು ನಡವಳಿಗಳನ್ನು ಪಾಲನೆ ಮಾಡತಕ್ಕದ್ದು. ಪ್ರತಿ ತಿಂಗಳಿಗೆ ಕನಿಷ್ಠ ಒಂದು ಸಭೆಯನ್ನು ಆಯೋಜಿಸತಕ್ಕದ್ದು. ಒಟ್ಟಾರೆ ಸದಸ್ಯರುಗಳ ಪೈಕಿ ಕನಿಷ್ಠ ಅರ್ಧದಷ್ಟು ಸದಸ್ಯರುಗಳು ಹಾಜರಿರದ ಹೊರತು ಯಾವುದೇ ಸಭೆಯಲ್ಲಿ ವ್ಯವಹಾರಗಳನ್ನು ನಡೆಸತಕ್ಕದ್ದಲ್ಲ.

(3) ಒಂದು ವೇಳೆ, ಯಾವುದೇ ಕಾರಣದಿಂದ ಅಧ್ಯಕ್ಷನು ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ಸಭೆಯಲ್ಲಿ ಉಪಸ್ಥಿತರಿರುವಂತಹ ಸದಸ್ಯರುಗಳಿಂದ ಆಯ್ಕೆಯಾದಂತಹ ಯಾರೇ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಪ್ರಾಧಿಕಾರದ ಸಭೆಯ ಮುಂದೆ ಉದ್ಭವಿಸುವಂತಹ ಎಲ್ಲಾ ಪ್ರಶ್ನೆಗಳನ್ನು ಹಾಜರಿರುವಂತಹ ಸದಸ್ಯರುಗಳ ಬಹುಮತದ ಆಧಾರದ ಮೇಲೆ ಮತ್ತು ಮತದಾನದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಒಂದು ವೇಳೆ ಸಮಾನ ಸಂಖ್ಯೆಯ ಮತಗಳು ಚಲಾವಣೆಯಾದ ಪಕ್ಷದಲ್ಲಿ, ಅಧ್ಯಕ್ಷ ಅಥವಾ ಆತನ ಅನುಪಸ್ಥಿತಿಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತಹ ಸದಸ್ಯನು ದ್ವಿತೀಯ ಅಥವಾ ನಿರ್ಣಯಾತ್ಮಕ ಮತವನ್ನು ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

(5) ಪ್ರಾಧಿಕಾರದ ಯಾವುದೇ ಸಭೆಯಲ್ಲಿ ಅಥವಾ ಅದರ ಸಮಿತಿಯಲ್ಲಿ, ಯಾರೇ ಸದಸ್ಯನು ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ತಾನೇ ನೇರವಾಗಿ ಅಥವಾ ಪರೋಕ್ಷವಾಗಿ ಆತನ ಪಾಲುದಾರನ ಮೂಲಕ ಅಂತಹ ವಿಷಯಕ್ಕೆ ಸಂಬಂಧಿಸಿದಂತೆ, ಯಾವುದೇ ಹಿತಾಸಕ್ತಿಯನ್ನು ಅಥವಾ ಪಾಲನ್ನು ಹೊಂದಿದ್ದ ಪಕ್ಷದಲ್ಲಿ, ಅಂತಹ ಸದಸ್ಯನು ಮತದಾನದಲ್ಲಿ ಪಾಲ್ಗೊಳ್ಳತಕ್ಕದ್ದಲ್ಲ ಅಥವಾ ಮತ ಚಲಾಯಿಸತಕ್ಕದ್ದಲ್ಲ.

**9. ಸಮಿತಿಗಳ ರಚನೆ (Appointment of Committees).**–(1) ಪ್ರಾಧಿಕಾರವು ಕಾಲಕಾಲಕ್ಕೆ, ಅಧ್ಯಕ್ಷ, ಆಯುಕ್ತ ಮತ್ತು ಅದು ಸೂಕ್ತವೆಂದು ಅಭಿಪ್ರಾಯಪಟ್ಟಂತೆ ಅಂತಹ ಇತರ ಸದಸ್ಯರುಗಳನ್ನೊಳಗೊಂಡ ಸಮಿತಿಗಳನ್ನು ರಚಿಸಬಹುದು ಮತ್ತು ಸರ್ಕಾರದ ಅನುಮೋದನೆಯೊಂದಿಗೆ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಮತ್ತು ಅಂತಹ ಯುಕ್ತ ಅವಧಿಗೆ ಅಂತಹ ಸಮಿತಿಗಳೊಂದಿಗೆ ಸೇರಬಹುದು. ಅದು ಅಪೇಕ್ಷಿಪಡುವಂತಹ ಯಾರೇ ವ್ಯಕ್ತಿಯ ಅಥವಾ ವ್ಯಕ್ತಿಗಳ ಸಹಾಯ ಅಥವಾ ಸಲಹೆಗಳು ಅವಶ್ಯಕವಿದ್ದಲ್ಲಿ, ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಿಸಿದಂತಹ ವಿಷಯ ಕುರಿತಂತೆ ಅವುಗಳನ್ನು ಅಂತಹ ಸಮಿತಿಗಳಿಗೆ ಅದು ವಿಚಾರಣೆ ಮತ್ತು ವರದಿಗಾಗಿ ವಹಿಸಬಹುದು.

(2) ಉಪ-ಪ್ರಕರಣ (1)ರಡಿಯಲ್ಲಿ ರಚಿಸಲ್ಪಟ್ಟ ಪ್ರತಿಯೊಂದು ಸಮಿತಿಯೂ ಸಹ ಪ್ರಾಧಿಕಾರವು ಕಾಲಕಾಲಕ್ಕೆ ಅಂತಹ ಸಮಿತಿಗೆ ನೀಡಿದ ಯಾವುದೇ ಸೂಚನೆಗಳಿಗೆ ಬದ್ಧತೆಯನ್ನು ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ಯಾವುದೇ ಸಮಯದಲ್ಲಿ ಈ ರೀತಿ ನೇಮಕಮಾಡಿದ ಸಮಿತಿಯ ಯಾವುದೇ ಸಮಿತಿಯ ರಚನೆಯನ್ನು ಮಾರ್ಪಡಿಸಬಹುದು ಅಥವಾ ಅಂತಹ ನೇಮಕಾತಿಯನ್ನು ರದ್ದುಪಡಿಸಬಹುದು. ಅಧ್ಯಕ್ಷನು ಅಂತಹ ಪ್ರತಿಯೊಂದು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು.

**10. ವಿವಿಧ ಪ್ರಾಧಿಕಾರಗಳ ಅಧಿಕಾರಗಳು (Powers of different Authorities).**–(1) ಪ್ರಾಧಿಕಾರದ ಪರವಾಗಿ, ಆಯುಕ್ತನು, ಯಾವುದೇ ಅಂದಾಜುಗಳನ್ನು ಮಂಜೂರು ಮಾಡಬಹುದು.